

بسم اللهِ الرّحمٰن الرّحيم

# ಅಹ್ಮದಿಯಾ ಖಿಲಾಫತ್: ದೈವಿಕ ಅನುಗ್ರಹ ಮತ್ತು ಪ್ರಗತಿಯ ಹಾದಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **30–05–2025** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

وَاَقْسَمُوْا بِاللّٰهِ جَهْدَ اَيْمَانِهِمْ لَئِنْ اَمَرْتَهُمْ لَيَخْرُجُنَّ قُلْ لَّا تُقْسِمُوْا طَاعَةٌ
مَّعْرُوْفَةٌ اِنَّ اللّٰهَ خَبِيْرٌ بِمَا تَعْمَلُوْنَ ﴿٥٤﴾
قُلْ اَطِيْعُوا اللّٰهَ وَاَطِيْعُوا الرَّسُوْلَ فَاِنْ تَوَلَّوْا فَاِنَّمَا عَلَيْهِ مَا حُمِّلَ وَعَلَيْكُمْ مَّا
حُمِّلْتُمْ وَاِنْ تُطِيْعُوْهُ تَهْتَدُوْا وَمَا عَلَى الرَّسُوْلِ اِلَّا الْبَلٰغُ الْمُبِيْنُ ﴿٥٥﴾
وَعَدَ اللّٰهُ الَّذِيْنَ اٰمَنُوْا مِنْكُمْ وَعَمِلُوا الصّٰلِحٰتِ لَيَسْتَخْلِفَنَّهُمْ فِي الْاَ
رْضِ كَمَا اسْتَخْلَفَ الَّذِيْنَ مِنْ قَبْلِهِمْ وَلَيُمَكِّنَنَّ لَهُمْ دِيْنَهُمُ الَّذِي ا
رْتَضٰى لَهُمْ وَلَيُبَدِّلَنَّهُمْ مِّنْۢ بَعْدِ خَوْفِهِمْ اَمْنًا يَعْبُدُوْنَنِيْ لَا يُشْرِكُوْ
نَ بِيْ شَيْـًٔا وَمَنْ كَفَرَ بَعْدَ ذٰلِكَ فَاُولٰٓئِكَ هُمُ الْفٰسِقُوْنَ ﴿٥٦﴾
وَاَقِيْمُوا الصَّلٰوةَ وَاٰتُوا الزَّكٰوةَ وَاَطِيْعُوا الرَّسُوْلَ لَعَلَّكُمْ تُرْحَمُوْنَ ﴿٥٧﴾

ಅಲ್ಲಾಹನ ಕೃಪೆಯಿಂದ, ಅಹ್ಮದಿಯಾ ಜಮಾಅತಿನಲ್ಲಿ ಖಿಲಾಫತ್ ವ್ಯವಸ್ಥೆ ಸ್ಥಾಪನೆಯಾಗಿ 117 ವರ್ಷಗಳು ಕಳೆದಿವೆ. ಇದು 1908ರಲ್ಲಿ ಅಲ್ಲಾಹನ ವಾಗ್ದಾನಗಳು ಹಾಗೂ ಹಝ್ರತ್ ಪೈಗಂಬರ್(ಸ)ರ ಭವಿಷ್ಯವಾಣಿಗಳ ಪ್ರಕಾರವೇ ಸ್ಥಾಪಿತವಾಯಿತು. ಹಝ್ರತ್ ವಾಗ್ದತ್ತ ಮಸೀಹ್‌ರ ಆಗಮನದ ನಂತರ ಇಸ್ಲಾಮಿನ ಪುನರುತ್ಥಾನದ ಒಂದು ಹೊಸ ಯುಗ ಪ್ರಾರಂಭವಾಗುವುದು ಮತ್ತು ನಂತರ ಈ ವ್ಯವಸ್ಥೆಯಲ್ಲಿ ಖಿಲಾಫತಿನ ಯುಗವೂ ಪ್ರಾರಂಭವಾಗುವುದು ಎಂದು ಯಾವುದರ ಕುರಿತು ಅಲ್ಲಾಹನು ಭವಿಷ್ಯ ನುಡಿದಿದ್ದನೋ ನಾವು ಆ ವ್ಯವಸ್ಥೆಯ ಭಾಗವಾಗಿದ್ದೇವೆ ಎಂಬುದು ಅಹ್ಮದಿಯಾ ಜಮಾಅತಿನ ಮೇಲೆ ಅಲ್ಲಾಹನ ಬಹಳ ದೊಡ್ಡ ಔದಾರ್ಯವಾಗಿದೆ.

ಈ ಕುರಿತು ಹಝ್ರತ್ ಪೈಗಂಬರ್(ಸ) ಬಹಳ ಸ್ಪಷ್ಟವಾಗಿ ಹೀಗೆ ಭವಿಷ್ಯ ನುಡಿದಿದ್ದರು: ಅಲ್ಲಾಹನು ಬಯಸಿದಷ್ಟು ಕಾಲ ನಿಮ್ಮಲ್ಲಿ ನುಬುವ್ವತ್ (ಪ್ರವಾದಿತ್ವ) ಇರುವುದು. ಅನಂತರ ಅಲ್ಲಾಹನು ಅದನ್ನು ಎತ್ತಿಹಾಕುವನು ಹಾಗೂ ಪ್ರವಾದಿತ್ವದ ಮಾದರಿಯಲ್ಲಿ ಖಿಲಾಫತ್ ಸ್ಥಾಪನೆಯಾಗುವುದು. ಅನಂತರ ಅಲ್ಲಾಹನು ಬಯಸುವಾಗ ಆ ಅನುಗ್ರಹವನ್ನು ಕೂಡ ಕೊನೆಗೊಳಿಸುವನು. ಅನಂತರ ಅವನ ವಿಧಿಯ ಪ್ರಕಾರ ದುಷ್ಟ ರಾಜಪ್ರಭುತ್ವ ಸ್ಥಾಪನೆಯಾಗುವುದು. ಈ ಯುಗ ಕೊನೆಗೊಳ್ಳುವಾಗ ಅದಕ್ಕಿಂತಲೂ ಹೆಚ್ಚು ನಿರಂಕುಶವಾದ ರಾಜಪ್ರಭುತ್ವ ಸ್ಥಾಪನೆಯಾಗುವುದು. ಅಲ್ಲಾಹನು ಬಯಸಿದಷ್ಟು ಕಾಲ ಅದು ಇರುವುದು. ನಂತರ ಅಲ್ಲಾಹನು ಅದನ್ನು ಕೂಡ ಕೊನೆಗೊಳಿಸುವನು. ಅನಂತರ ಪುನಃ ಪ್ರವಾದಿತ್ವದ ಮಾದರಿಯಲ್ಲಿ ಖಿಲಾಫತ್ ಸ್ಥಾಪನೆಯಾಗುವುದು. ಇದನ್ನು ಹೇಳಿ ಹಝ್ರತ್ ಪೈಗಂಬರ್(ಸ) ಮೌನವಾದರು.

ಒಟ್ಟಿನಲ್ಲಿ, ಇದು ಹಝ್ರತ್ ಪೈಗಂಬರ್(ಸ)ರ ಭವಿಷ್ಯವಾಣಿಯಾಗಿತ್ತು, ಅದರ ಪ್ರಕಾರ ಅಲ್ಲಾಹನ ಕೃಪೆಯಿಂದ, ಹಝ್ರತ್ ಮಸೀಹ್ ಮೌಊದ್(ಅ)ರ ಆಗಮನದ ನಂತರ ಇಸ್ಲಾಮಿನ ಪುನರುತ್ಥಾನದ ಹೊಸ ಯುಗ ಪ್ರಾರಂಭವಾಯಿತು ಮತ್ತು ಅವರ ನಿಧನದ ನಂತರ ಖಿಲಾಫತಿನ ಯುಗ ಸಹ ಪ್ರಾರಂಭವಾಯಿತು.

(ಖುತ್ಬದ ಆರಂಭದಲ್ಲಿ ಪಠಿಸಲಾದ ಪವಿತ್ರ ಖುರ್‌ಆನಿನ ಸೂಕ್ತಗಳ ಅನುವಾದವನ್ನು ಪ್ರಸ್ತುತಪಡಿಸಿದ ನಂತರ ಹುಝೂರ್ ಹೇಳಿದರು:) ನಿಮ್ಮಲ್ಲಿ ಖಿಲಾಫತ್ ವ್ಯವಸ್ಥೆ ಸ್ಥಾಪಿತವಾಗುವುದು ಎಂದು ಅಲ್ಲಾಹನು ಮುಸ್ಲಿಮರಿಗೆ ವಾಗ್ದಾನ ಮಾಡಿದ್ದಾನೆ ಎಂದು ಈ ವಚನಗಳಿಂದ ಸ್ಪಷ್ಟವಾಗಿ ತಿಳಿದುಬರುತ್ತದೆ. ನೇರಮಾರ್ಗದ ಖಲೀಫರ ಕಾಲಘಟ್ಟ ಮೂವತ್ತು ವರ್ಷಗಳ ಕಾಲ ಇತ್ತು. ಆದರೆ ಇದು ಮೂವತ್ತು ವರ್ಷಗಳಿಗಾಗಿ ಅಲ್ಲಾಹನು ಮಾಡಿದ ವಾಗ್ದಾನ ಆಗಿರಲಿಲ್ಲ, ಬದಲಾಗಿ ಇದೊಂದು ಸಂಪೂರ್ಣ ವಾಗ್ದಾನವಾಗಿತ್ತು ಹಾಗೂ ಅದರ ವಿವರಣೆಯನ್ನು ಹಝ್ರತ್ ಪೈಗಂಬರ್(ಸ) ಸಹ ನೀಡಿದ್ದರು. ಆದ್ದರಿಂದ, ನಾವು ಹಝ್ರತ್ ಮಸೀಹ್ ಮೌಊದ್(ಅ)ರನ್ನು ನಂಬುವುದರ ಮೂಲಕ, ಅಲ್ಲಾಹನ ಆಜ್ಞೆಗಳನ್ನು ಪಾಲಿಸುವುದಾಗಿ ಪ್ರತಿಜ್ಞೆ ಮಾಡಿದ್ದೇವೆ ಎಂಬುದನ್ನು ಅಹ್ಮದಿಯರಾದ ನಾವು ನೆನಪಿಟ್ಟುಕೊಳ್ಳಬೇಕು. ಆದರೆ ಅದಕ್ಕಾಗಿ ಕೆಲವು ನಿಬಂಧನೆಗಳಿವೆ. ಆದ್ದರಿಂದ, ನಾವು ಈ ಷರತ್ತುಗಳನ್ನು ಪೂರೈಸಬೇಕಾಗುವುದು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಆದ್ದರಿಂದ ಪ್ರಿಯರೇ, ವಿರೋಧಿಗಳ ಎರಡು ಹುಸಿ ಸಂತೋಷಗಳನ್ನು ಕೊನೆಗೊಳಿಸಲು ಅಲ್ಲಾಹನು ಎರಡು ದೈವಿಕ ಶಕ್ತಿಗಳನ್ನು ತೋರಿಸುತ್ತಾನೆ ಎಂಬುದು ಆರಂಭ ಕಾಲದಿಂದಲೂ ಅಲ್ಲಾಹನ ನಡೆವಳಿಕೆ ಕ್ರಮವಾಗಿದೆ. ನಾನು ಅಲ್ಲಾಹನ ಕಡೆಯಿಂದ ದೈವಿಕ ಶಕ್ತಿಯ ರೂಪದಲ್ಲಿ ಪ್ರಕಟಗೊಂಡಿದ್ದೇನೆ; ನಾನು ಅಲ್ಲಾಹನ ಒಂದು ಸಾಕಾರ ರೂಪದ ಶಕ್ತಿಯಾಗಿದ್ದೇನೆ. ನನ್ನ ನಂತರ ಇತರ ಕೆಲವರು ಬರುವರು. ಅವರು ಅಲ್ಲಾಹನ ಎರಡನೇ ಶಕ್ತಿಯ ಪ್ರಕಟಣೆಯಾಗುವರು. ಆದ್ದರಿಂದ, ನೀವು ಅಲ್ಲಾಹನ ದ್ವಿತೀಯ ಶಕ್ತಿ ಪ್ರಕಟಣೆಯನ್ನು ಕಾಯುತ್ತಾ ಒಟ್ಟಾಗಿ ದುಆ ಮಾಡಿರಿ. ಎರಡನೇ ದೈವಿಕ ಶಕ್ತಿ ಆಕಾಶದಿಂದ ಇಳಿಯಲಿಕ್ಕಾಗಿ ಪ್ರತಿಯೊಂದು ದೇಶದ ಪ್ರತಿಯೊಂದು ಜಮಾಅತಿನ ಸಜ್ಜನರು ಒಟ್ಟಾಗಿ ಪ್ರಾರ್ಥನೆಗಳಲ್ಲಿ ನಿರತರಾಗಿರಬೇಕು.

ಹಝ್ರತ್ ಮಸೀಹ್ ಮೌಊದ್(ಅ) ಈ ಉಪದೇಶವನ್ನು ನೀಡಿದ ಆ ಸಮಯದಲ್ಲಿ, ಭಾರತದಲ್ಲಿ ಜಮಾಅತ್ ಇತ್ತು ಮತ್ತು ಕೆಲವೇ ಕೆಲವು ಜನರು ಹೊರಗಿದ್ದರು. ಆದರೆ ಪ್ರತಿಯೊಂದು ದೇಶದಲ್ಲಿ ಹೀಗೆ ದುಆ ಮಾಡಬೇಕು ಎಂದು ಹೇಳಿ ಹಝ್ರತ್ ಮಸೀಹ್ ಮೌಊದ್(ಅ) ಒಂದು ರೀತಿಯಲ್ಲಿ ಭವಿಷ್ಯ ನುಡಿದಿರುವರು. ಅಂದರೆ ಲೋಕದಾದ್ಯಂತ ಅಹ್ಮದಿಯಾ ಜಮಾಅತ್ ಹರಡುವ ಕಾಲವು ಭವಿಷ್ಯದಲ್ಲಿ ಬರುವುದು ಎಂಬುದರ ಸೂಚನೆ ನೀಡಿದರು. ಪ್ರಪಂಚದಾದ್ಯಂತ ಅಹ್ಮದಿಯಾ ಜಮಾಅತ್ ಹರಡಿರುವ ಕಾಲವನ್ನು ಇಂದು ನಾವು ನೋಡುತ್ತಿದ್ದೇವೆ. ಖಿಲಾಫತಿನೊಂದಿಗೆ ನಿಷ್ಠೆ, ಪ್ರೀತಿ ಮತ್ತು ಅನುರಾಗದ ಸಂಬಂಧವು ನಮಗೆ ಕಂಡುಬರುತ್ತಿದೆ. ಮುಂದೆಯೂ ಅಲ್ಲಾಹನು ತನ್ನ ಕೃಪೆಯಿಂದ ನಮ್ಮನ್ನು ಅನುಗ್ರಹಿಸುತ್ತಾ ಇರುವನು. ಏಕೆಂದರೆ ಇದು ಅಲ್ಲಾಹನ ವಾಗ್ದಾನವಾಗಿದೆ. ಆದ್ದರಿಂದ, ನಾವು ಖಿಲಾಫತಿನೊಂದಿಗೆ ಹೊಂದಿಕೊಂಡಿರಬೇಕು ಮತ್ತು ಖಿಲಾಫತ್ ವ್ಯವಸ್ಥೆಯನ್ನು ನೆಲೆನಿಲ್ಲಿಸಲು ಯಾವ ತ್ಯಾಗಕ್ಕೂ ಸಿದ್ಧರಾಗಿರಬೇಕು.

ಅಹ್ಮದಿಯಾ ಜಮಾಅತಿನಲ್ಲಿಯೂ ಬಹುಶಃ ಖಿಲಾಫತ್ ರಾಜಪ್ರಭುತ್ವವಾಗಿ ಬದಲಾಗಬಹುದು ಎಂದು ಕೆಲವರು ಭಾವಿಸುತ್ತಾರೆ. ಇದನ್ನು ಹಝ್ರತ್ ಮುಸ್ಲಿಹ್ ಮೌಊದ್(ರ) ತೀವ್ರವಾಗಿ ಖಂಡಿಸಿ ಹೀಗೆ ಹೇಳಿರುವರು: ಆಧ್ಯಾತ್ಮಿಕತೆ ಮತ್ತು ತಖ್ವಾ (ದೇವಭಕ್ತಿ) ಇರುವ ವರೆಗೂ ಅಹ್ಮದಿಯಾ ಜಮಾಅತಿನಲ್ಲಿ ರಾಜಪ್ರಭುತ್ವ ಬರದು – ಇನ್‌ಶಾ ಅಲ್ಲಾಹ್. ಅಲ್ಲಾಹನ ಕೃಪೆಯಿಂದ, ಖಿಲಾಫತ್ ವ್ಯವಸ್ಥೆಯು ಅಲ್ಲಾಹನ ಇಚ್ಛೆಯಂತೆ ಸ್ಥಾಪಿತವಾದ ವ್ಯವಸ್ಥೆಯಾಗಿದೆ ಮತ್ತು ಅದು ಯಾವುದೇ ರೀತಿಯ ಲೌಕಿಕ ರಾಜಪ್ರಭುತ್ವವಿಲ್ಲದೆ ಮುಂದುವರಿಯುವುದು. ಆಯಾ ಕಾಲದ ಖಲೀಫರು ರಾತ್ರಿಗಳಲ್ಲಿ ಎದ್ದು ಜಮಾಅತಿನ ಸದಸ್ಯರಿಗಾಗಿ ದುಆ ಮಾಡುತ್ತಾರೆ. ಹೀಗೆ ಮಾಡುವ ಯಾವನಾದರೂ ರಾಜನು ಇದ್ದಾನೆಯೇ? ಆದ್ದರಿಂದ, ನಾವು ಈ ವಿಷಯವನ್ನು ನೆನಪಿಟ್ಟುಕೊಂಡು ಅದಕ್ಕೆ ತಕ್ಕಂತೆ ವರ್ತಿಸಿದರೆ ಮಾತ್ರ ನಾವು ಯಶಸ್ವಿಯಾಗಬಹುದು. ಖಿಲಾಫತಿನ ಈ ವ್ಯವಸ್ಥೆಯು ಎಂತಹ ವ್ಯವಸ್ಥೆಯಾಗಿದೆ ಎಂದರೆ ಅಲ್ಲಾಹನು ಸ್ವತಃ ಹೃದಯಗಳನ್ನು ಅದರ ಕಡೆಗೆ ತಿರುಗಿಸುತ್ತಾನೆ. ಇದೇ ದೈವಿಕ ಬೆಂಬಲವಾಗಿದೆ ಮತ್ತು ಪ್ರತಿಯೊಂದು ಖಿಲಾಫತಿನ ಕಾಲದಲ್ಲಿ ನಾವು ಇದನ್ನು ನೋಡಿದ್ದೇವೆ. ಅಹ್ಮದಿಯಾ ಜಮಾಅತ್ ಒಂದು ವ್ಯವಸ್ಥೆಯಲ್ಲಿ ಪೋಣಿಸಲ್ಪಟ್ಟಿದೆ ಎಂದು ಲೋಕದ ಕಡೆಗೆ ನೋಡಿದರೆ ಗೊತ್ತಾಗುತ್ತದೆ. ಅಲ್ಲಾಹನ ಕೃಪೆಯಿಂದ, ಜಮಾಅತಿಗೆ ಸೇರಿದವರು ಖಿಲಾಫತಿಗೆ ನಿಷ್ಠರಾಗಿರುವುದರಿಂದ ಅವರ ಮೇಲೆ ಅಲ್ಲಾಹನ ಅನೇಕ ಅನುಗ್ರಹಗಳಿವೆ. ಅಹ್ಮದಿಯಾ ಜಮಾಅತಿನ ಮೇಲೆ ಶತ್ರುಗಳಿಂದ ಅನೇಕ ದೌರ್ಜನ್ಯಗಳು ನಡೆಯುತ್ತಿವೆ ಎಂಬುದು ನಿಜ. ವಿಶೇಷವಾಗಿ ಪಾಕಿಸ್ತಾನ ಮತ್ತು ಕೆಲವು ಇತರ ದೇಶಗಳಲ್ಲಿ. ಆದರೆ ಅಲ್ಲಾಹನ ಕೃಪೆಯಿಂದ ಎಲ್ಲರೂ ತಮ್ಮ ವಿಶ್ವಾಸದಲ್ಲಿ ದೃಢವಾಗಿದ್ದಾರೆ ಮತ್ತು ಈ ಕಷ್ಟಗಳು ನಮ್ಮನ್ನು ನಮ್ಮ ದೀನಿನಿಂದ ಬೇರ್ಪಡಿಸಲು ಸಾಧ್ಯವಿಲ್ಲ ಎಂದು ದೃಢವಾಗಿ ನಂಬುತ್ತಾರೆ. ಇದಕ್ಕೆ ಪ್ರತಿಯಾಗಿ ಅಲ್ಲಾಹನು ನಮ್ಮ ಮೇಲೆ ಮತ್ತು ನಮ್ಮ ಪೀಳಿಗೆಯ ಮೇಲೆ ಅನುಗ್ರಹಗಳ ಮಳೆ ಸುರಿಸುತ್ತಿದ್ದಾನೆ.

ಖಿಲಾಫತಿನ ಅನುಗ್ರಹದಿಂದ ನಾವು ನಿಜವಾದ ಲಾಭವನ್ನು ಪಡೆಯಬೇಕಿದ್ದರೆ ಮತ್ತು ಅಲ್ಲಾಹನ ಅನುಗ್ರಹಗಳಿಗೆ ನಿಜವಾದ ವಾರಸುದಾರರಾಗಬೇಕಿದ್ದರೆ, ನಾವು ಎಲ್ಲ ರೀತಿಯ ಶಿರ್ಕ್, ಅಹಂಕಾರ ಮತ್ತು ಗರ್ವದಿಂದ ನಮ್ಮನ್ನು ಮುಕ್ತಗೊಳಿಸಿಕೊಳ್ಳಬೇಕು. ಅಂತಹ ಜನರು ನಮಾಝನ್ನು ನೆಲೆನಿಲ್ಲಿಸುವವರು ಮತ್ತು ಝಕಾತನ್ನು ನೀಡುವವರು ಆಗಿರುವರು ಎಂದು ಅಲ್ಲಾಹನು ಹೇಳಿದ್ದಾನೆ. ಅಲ್ಲಾಹನ ಈ ಆಜ್ಞೆಯನ್ನು ಪ್ರತಿ ಅಹ್ಮದಿಯೂ ನೆನಪಿಟ್ಟುಕೊಳ್ಳಬೇಕು. ಖಿಲಾಫತಿಗೆ ತನ್ನನ್ನು ತಾನು ಜೋಡಿಸಿಕೊಳ್ಳಲು ಬಯಸುವ ಮತ್ತು ಅದರಿಂದ ಲಾಭ ಪಡೆಯಲು ಬಯಸುವ ಪ್ರತಿಯೊಬ್ಬ ಅಹ್ಮದಿಯೂ ನಮಾಝನ್ನು ನೆಲೆನಿಲ್ಲಿಸುವುದರ ಕುರಿತು ಸಂಪೂರ್ಣ ಗಮನಹರಿಸಬೇಕು ಎಂಬ ಅಂಶವನ್ನು ನೆನಪಿನಲ್ಲಿಟ್ಟುಕೊಳ್ಳಬೇಕು.

ನಮಾಝನ್ನು ಸ್ಥಿರಗೊಳಿಸುವುದರ ಕುರಿತು ಹಝ್‌ರತ್ ಮುಸ್ಲಿಹ್ ಮೌಊದ್(ರ) ಒಂದೆಡೆ ಹೀಗೆ ಹೇಳಿದ್ದಾರೆ: ನಮಾಝಿನ ಅತ್ಯುತ್ತಮ ಭಾಗವು ಜುಮಾ ಆಗಿದೆ. ಅದರಲ್ಲಿ ಇಮಾಮ್ ಖುತ್ಬ ನೀಡುತ್ತಾರೆ ಮತ್ತು ಉಪದೇಶಗಳನ್ನು ಕೊಡುತ್ತಾರೆ. ಇತ್ತೀಚಿಗೆ ನಾನು ಇಸ್ಲಾಮಿನ ಇತಿಹಾಸ ಮತ್ತು ಹಝ್‌ರತ್ ಪೈಗಂಬರ್(ಸ)ರ ಜೀವನ ಚರಿತ್ರೆಯ ಬಗ್ಗೆ ವಿವರಿಸುತ್ತಿದ್ದೇನೆ. ಅದರಲ್ಲಿಯೂ ನಮ್ಮೆಲ್ಲರಿಗೂ ಉಪದೇಶಗಳಿರುವ ಅನೇಕ ವಿಷಯಗಳಿವೆ ಮತ್ತು ಜನರು ಅದರಿಂದ ಬಹಳಷ್ಟು ಲಾಭ ಪಡೆಯುತ್ತಿದ್ದಾರೆ. ಇದರ ಜೊತೆಗೆ, ಅವರಿಗೆ ಇಸ್ಲಾಮಿನ ಚರಿತ್ರೆಯ ಬಗ್ಗೆಯೂ ಗೊತ್ತಾಗುತ್ತದೆ. ಇದರಿಂದ ಸಾಮುದಾಯಿಕ ಏಕತೆ ಮತ್ತು ಒಗ್ಗಟ್ಟು ಉಂಟಾಗುತ್ತದೆ. ಎಲ್ಲರ ಖಿಬ್ಲ ಒಂದೇ ದಿಕ್ಕಿಗೆ ಆಗಿರುತ್ತದೆ. ಆದ್ದರಿಂದ, ಅಲ್ಲಾಹನು ನಮ್ಮೆಡೆಯಲ್ಲಿ ಸ್ಥಾಪಿಸಿರುವ ಈ ಖಿಲಾಫತಿನ ಕಾರಣದಿಂದ ಅಹ್ಮದಿಯಾ ಜಮಾಅತಿನಲ್ಲಿ ಒಂದು ಏಕತೆ ಉಂಟಾಗಿದೆ. ಲೋಕದ 215 ದೇಶಗಳಲ್ಲಿ ವಾಸಿಸುವ ಪ್ರತಿಯೊಬ್ಬ ಅಹ್ಮದಿಯೂ ಒಂದಾಗಿ ಈ ವ್ಯವಸ್ಥೆಗೆ ಹೊಂದಿಕೊಂಡಿದ್ದಾನೆ ಮತ್ತು ತನ್ನನ್ನು ತಾನು ಸುಧಾರಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಅಲ್ಲಾಹನು ಝಕಾತನ್ನು ಪಾವತಿಸಲು ಸಹ ಆದೇಶಿಸಿದ್ದಾನೆ. ಇದು ನಮ್ಮ ಸಂಪತ್ತನ್ನು ಶುದ್ಧೀಕರಿಸಲು ಅಗತ್ಯ. ಇದರಲ್ಲಿ ಇತರ ಆರ್ಥಿಕ ತ್ಯಾಗಗಳೂ ಸೇರಿವೆ. ಇಂದು ಅಹ್ಮದಿಯಾ ಜಮಾಅತ್ ಮೂಲಕ ಮಾತ್ರ ಈ ಆರ್ಥಿಕ ವ್ಯವಸ್ಥೆ ಜಾರಿಯಲ್ಲಿದೆ ಎಂದು ನಾವು ಕಾಣಬಹುದಾಗಿದೆ.

(ಹುಝೂರ್ ಹೇಳಿದರು:) ಕೆಲವು ಪರಿಸ್ಥಿತಿಗಳಿಂದಾಗಿ ಕೆಲವು ಸ್ಥಳಗಳಲ್ಲಿ ಕೆಲವು ಕಷ್ಟಗಳು ಕೂಡ ಬರುತ್ತಿವೆ. ಆದರೆ ಈ ಎಲ್ಲ ಕಷ್ಟಗಳನ್ನು ನೋಡಿಯೂ ನಮಗೆ ಸಾಂತ್ವನವನ್ನು ನೀಡುವ ಮತ್ತು ನಮ್ಮ ಅಗತ್ಯಗಳನ್ನು ಪೂರೈಸಲು ಪ್ರಯತ್ನಿಸುವ ಖಿಲಾಫತ್ ವ್ಯವಸ್ಥೆ ನಮ್ಮಲ್ಲಿ ಇದೆ ಎಂಬುದಕ್ಕಾಗಿ ಅಹ್ಮದಿಯರು ಅಲ್ಲಾಹನಿಗೆ ಕೃತಜ್ಞರಾಗಿರುತ್ತಾರೆ.

ಲೋಕದಲ್ಲಿ ಅನೇಕ ದುರ್ಘಟನೆಗಳು ಸಂಭವಿಸುವುದು ಎಂದು ಹಝ್‌ರತ್ ಮಸೀಹ್ ಮೌಊದ್(ಅ) ಹೇಳಿದ್ದರು. ಕೆಲವು ನೈಸರ್ಗಿಕ ವಿಕೋಪಗಳು, ಕೆಲವು ಮಾನವರ ತಪ್ಪುಗಳಿಂದ ಉಂಟಾಗುವ ಯುದ್ಧಗಳು ಮತ್ತು ಕಲಹಗಳು. ಈ ಜನರು ಈಗಲೂ ಅಲ್ಲಾಹನ ಕಡೆಗೆ ಗಮನ ಹರಿಸದಿದ್ದರೆ, ಜಗತ್ತಿಗೆ

ಒಂದು ವಿನಾಶ ಬರಲಿದೆ. ಅದರ ಬಗ್ಗೆ ಹಝ್ರತ್ ಮಸೀಹ್ ಮೌಊದ್(ಅ) ಹಲವಾರು ಬಾರಿ ಭವಿಷ್ಯ ನುಡಿದಿದ್ದಾರೆ. ಆದ್ದರಿಂದ, ಖಿಲಾಫತ್ ವ್ಯವಸ್ಥೆಗೆ ಸೇರಿದವರ ಕರ್ತವ್ಯವೇನೆಂದರೆ, ನಾವು ಜಗತ್ತನ್ನು ವಿನಾಶದಿಂದ ರಕ್ಷಿಸಬೇಕು ಮತ್ತು ಅದಕ್ಕಾಗಿ ಜಗತ್ತನ್ನು ಅಲ್ಲಾಹನ ಕಡೆಗೆ ತರಲು ಸಂಪೂರ್ಣ ಪ್ರಯತ್ನ ಮಾಡಬೇಕು ಹಾಗೂ ಸಂದೇಶವನ್ನು ತಲುಪಿಸಲು ನಮ್ಮ ಸಂಪನ್ಮೂಲಗಳು ಮತ್ತು ಸಾಮರ್ಥ್ಯಗಳನ್ನು ಬಳಸಿಕೊಳ್ಳಬೇಕು ಹಾಗೂ ಅದಕ್ಕಾಗಿ ನಮ್ಮ ಜೀವ, ಸಂಪತ್ತು ಮತ್ತು ಸಮಯವನ್ನು ತ್ಯಾಗ ಮಾಡಲು ಸದಾ ಸಿದ್ಧರಾಗಿರಬೇಕು. ಅದೇ ರೀತಿ, ಪ್ರತಿಯೊಬ್ಬ ಅಹ್ಮದಿಯ ಮೇಲೆ ಅಲ್ಲಾಹನ ವಿಶೇಷ ಅನುಗ್ರಹಗಳು ಇರಲು ಮತ್ತು ನಮ್ಮ ಮಕ್ಕಳನ್ನು ಮತ್ತು ನಮ್ಮನ್ನು ಸ್ವತಃ ವಿಪತ್ತುಗಳಿಂದ ರಕ್ಷಿಸಿಕೊಳ್ಳಲಿಕ್ಕಾಗಿ ಅಲ್ಲಾಹನೊಂದಿಗೆ ಇರುವ ಸಂಬಂಧವನ್ನು ಹೆಚ್ಚಿಸಬೇಕು. ಏಕೆಂದರೆ ಈ ವಿಪತ್ತುಗಳು ಮತ್ತು ವಿನಾಶಗಳು ಗಂಭೀರ ಸ್ವರೂಪವನ್ನು ಪಡೆಯುತ್ತಿವೆ ಮತ್ತು ಭವಿಷ್ಯದಲ್ಲಿ ಯಾವ ಸ್ವರೂಪವನ್ನು ಪಡೆಯುವುದು ಎಂದು ಊಹಿಸಲೂ ಸಾಧ್ಯವಿಲ್ಲ. ಆದ್ದರಿಂದ ಅಹ್ಮದಿಯಾ ಖಿಲಾಫತಿಗೆ ಸೇರಿಕೊಂಡಿದ್ದರೆ ಮಾತ್ರ ಈಗ ಲೋಕ ಬಾಕಿ ಉಳಿಯುವುದು ಎಂಬುದನ್ನು ಯಾವಾಗಲೂ ನೆನಪಿಡಬೇಕು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನನ್ನೊಡನೆ ಮಾಡಲಾದ ಎಲ್ಲ ವಾಗ್ದಾನಗಳನ್ನು ಅಲ್ಲಾಹನು ಪೂರೈಸುವ ವರೆಗೂ ಈ ಲೋಕ ಅಂತ್ಯಗೊಳ್ಳದು ಎಂದು ಅಲ್ಲಾಹನು ನನಗೆ ಭರವಸೆ ನೀಡಿದ್ದಾನೆ. ಅವುಗಳಲ್ಲಿ ಕೆಲವು ನನ್ನ ಜೀವನದಲ್ಲಿ ಮತ್ತು ಕೆಲವು ನನ್ನ ನಂತರ ಈಡೇರುವುದು.

ಆದ್ದರಿಂದ, ನಮ್ಮಲ್ಲಿ ಪ್ರತಿಯೊಬ್ಬರ ಕೆಲಸವೇನೆಂದರೆ, ಅಲ್ಲಾಹನ ಮಹತ್ವವನ್ನು ಹೃದಯಗಳಲ್ಲಿ ನೆಲೆಸುವಂತೆ ಮಾಡಬೇಕು ಮತ್ತು ಪ್ರಾಯೋಗಿಕವಾಗಿ ಅಲ್ಲಾಹನ ತೌಹೀದನ್ನು (ಏಕತ್ವ) ಪ್ರಕಟಪಡಿಸುವವರಾಗಬೇಕು. ಸಂಪೂರ್ಣ ವಿಧೇಯತೆಯ ಮಾದರಿಯನ್ನು ತೋರಿಸುವವರಾಗಬೇಕು ಮತ್ತು ಸತ್ಯವಿಶ್ವಾಸದಲ್ಲಿ ಮುನ್ನಡೆಯುವವರು ಆಗಬೇಕು. ನಮ್ಮಲ್ಲಿ ಪ್ರತಿಯೊಬ್ಬರಿಗೂ ಅಹ್ಮದಿಯಾ ಖಿಲಾಫತನ್ನು ನೆಲೆನಿಲ್ಲಿಸಲು ಎಲ್ಲ ತ್ಯಾಗಕ್ಕೆ ಸಿದ್ಧರಾಗಿರಲು, ನಾವು ಮಾಡುವ ಪ್ರತಿಜ್ಞೆಗಳನ್ನು ಪೂರೈಸಲು ಅಲ್ಲಾಹನು ಸೌಭಾಗ್ಯವನ್ನು ನೀಡಲಿ. ಲೋಕದಲ್ಲಿ ಅಲ್ಲಾಹನ ಏಕದೇವೋಪಾಸನೆಯ ಧ್ವಜವು ಎಲ್ಲೆಡೆ ಹಾರಾಡುವ ಮತ್ತು ಹಝ್ರತ್ ಪೈಗಂಬರ್(ಸ)ರ ದಾಸರಾಗಿಕೊಂಡು ಜನರು ಗುಂಪು ಗುಂಪಾಗಿ ಬರುವ ಮತ್ತು ಅಲ್ಲಾಹನ ಸಂಪೂರ್ಣ ವಿಧೇಯತೆಯನ್ನು ಪಡೆಯಲು ಪ್ರಯತ್ನಿಸುವವರು ಇರುವ ಯುಗವನ್ನು ನಮ್ಮ ಜೀವನದಲ್ಲಿ ನೋಡುವಂತೆ ಅಲ್ಲಾಹನು ಮಾಡಲಿ. ಅಂತಹ ದಿನವು ನಮ್ಮ ಪಾಲಿಗೆ ಅನುಗ್ರಹದ ದಿನವಾಗಿರುವುದು. ಖಿಲಾಫತ್ತಿನ ಬಗ್ಗೆ ಅಲ್ಲಾಹನು ನೀಡಿದ ವಾಗ್ದಾನದ ಅನುಗ್ರಹದಿಂದ ಇಂದು ನಾವು ಲಾಭ ಪಡೆಯುತ್ತಿದ್ದೇವೆ ಎಂದು ಆಗ ನಾವು ಹೇಳುವಂತಾಗುವೆವು. ಆ ದಿನಗಳು ಲೋಕವನ್ನು ವಿನಾಶದಿಂದ ರಕ್ಷಿಸುವ ದಿನಗಳಾಗುವುವು. ನಮ್ಮನ್ನು ಸ್ವತಃ ಸುಧಾರಿಸಿಕೊಳ್ಳಲು ಮತ್ತು ಅಲ್ಲಾಹನ ಸಂದೇಶವನ್ನು ಲೋಕಕ್ಕೆ ತಲುಪಿಸಲು ಅಲ್ಲಾಹನು ನಮಗೆ ಸೌಭಾಗ್ಯ ನೀಡಲಿ – ಆಮೀನ್.

(ಖುತ್ಬದ ಕೊನೆಯಲ್ಲಿ ಹುಝೂರ್ ಇಬ್ಬರು ದಿವಂಗತರ ಬಗ್ಗೆ ಪ್ರಸ್ತಾಪಿಸಿದರು, ಅವರ ಮಗ್‌ಫಿರತ್ ಮತ್ತು ಪದವಿಗಳ ಉನ್ನತಿಗಾಗಿ ದುಆ ಮಾಡಿದರು ಮತ್ತು ಅವರ ಜನಾಝ ನಮಾಝ್ ನಿರ್ವಹಿಸುವುದಾಗಿ ಹೇಳಿದರು.)

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَآءِ ذِي الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis*** *(atba)*

At, ***'Masjid Mubarak'***, *Islamabad, Tilford,* U.K. On 30-05-2025

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim | ***Layout****:* Basheer K.P. Manjeshwar

***Published By****:* Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon